ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ **5.3.2019**

ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ

ನಾನು ಎಂ ಬಿ ಎ ಪಧವಿದರನಾಗಿರುತ್ತೇನೆ. ನಾನು 2004 ನೇ ಇಸವಿಯಲ್ಲಿ ಕೆಲಸಕ್ಕಾಗಿ ಹುಡುಕಾಡುತ್ತಿದ್ದೆ. ನಿಪಿ-6 ರಲ್ಲಿ ಕಂಡು ಬರುವ ಕಟ್ಟಡದಲ್ಲಿ 2004 ನೇ ಇಸವಿಯಲ್ಲಿ ಒಂದು ಹಳೆ ಕಟ್ಟಡ ಇತ್ತು ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾವು ಈಗ ಶುಂಠಿ ಮತ್ತು ಜೋಳವನ್ನು ಬೆಳೆಯುತ್ತಿದ್ದೇವೆ. ನಮ್ಮ ಕುಟುಂಬಕ್ಕೆ ಹೆಬ್ಬಾಲೆ ಗ್ರಾಮದಲ್ಲೂ ಸಹ ಸ್ವತ್ತು ಇರುತ್ತದೆ ಎಂದರೆ ಸರಿ. ಸದ್ರಿ ಸ್ವತ್ತಿನ ಮೇಲೆ ಇದೇ ನ್ಯಾಯಾಲಯದಲ್ಲಿ ಬೇರೆ ಕೇಸು ನಡೆಯುತ್ತಿದೆ ಎಂದರೆ ಗೊತ್ತಿಲ್ಲ. ಸದ್ರಿ ಕೇಸಿನಲ್ಲಿ ಪಕ್ಷಗಾರನಾಗಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ವಿಳಾಸ ನನ್ನ ಸ್ವಂತ ಮನೆಯಾಗಿರುತ್ತದೆ. ಸದ್ರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದ್ರಿ ಮನೆಯನ್ನು ನಾನು 2007 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತೇನೆ. ನಾನು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ದಾವಾಸ್ತಿಯನ್ನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ, ಮರದ ಹಿಂಭಾಗದಲ್ಲಿ ಕಂಡು ಬರುವ ದೊಡ್ಡ ಹೆಂಚಿನ ಮನೆ ನಮ್ಮ ಮನೆಯಾಗಿರುತ್ತದೆ ಎಂದರೆ ಸರಿ ಎನ್ನುವರು. ಸದ್ರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಂಡು ಬರುವ ನಮ್ಮ ಮನೆಯ ಪಕ್ಕದಲ್ಲೆ ನಿಪಿ-6 ರಲ್ಲಿ ಬರುವ ಹಾಲಿನ ಡೈರಿ ಕಟ್ಟಡ ಇರುತ್ತದೆ ಎಂದರೆ ಸರಿ. ನಿಡಿ-1 ರಲ್ಲಿ ಇರುವ ಇನ್ನೊಂದು ಹೆಂಚಿನ ಕಟ್ಟಡವನ್ನು ತೆಗೆದು ನಿಪಿ-6 ರಲ್ಲಿ ಕಂಡು ಬರುವ ಹೊಸ ಕಟ್ಟಡವನ್ನು ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆ ಮೊದಲು ನಮಗೆ ಸೇರಿತ್ತು ಎಂದರೆ ಹೌದು ಎನ್ನುವರು. ಸದ್ರಿ ಭಾವಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಂಡು ಬರುವ ಹಳೆ ಮನೆಯನ್ನು ತೆಗೆದು ಡೈರಿಯ ಹೊಸ ಕಟ್ಟಡ ಕಟ್ಟಲಾಗಿರುತ್ತದೆ ಎಂದರೆ ಸರಿ.

ದಿಃ14.1.2004 ರಲ್ಲಿ ಕೆ ಎಸ್ ವೆಂಕಟರಮಣ ರಾವ್ ವಕೀಲರ ಮುಖಾಂತರ 2 ನೇ ಪ್ರತಿವಾದಿಗೆ ಒಂದು ನೋಟಿಸ್ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಜಿ ಎನ್ ಅಶೋಕ್ ಮತ್ತು ಜಿ ಎಲ್ ನಾರಾಯಣ ರವರು ಮದಲಾಪುರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಿರ್ದೇಶಕರಾಗಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ತಾನು ಹಾಜರುಪಡಿಸಿದ ಭಾವಚಿತ್ರವನ್ನು ತೋರಿಸಿ, ಅದನ್ನು ನೀವೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎನ್ನುವರು ಸದ್ರಿ ಭಾವಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು.

ಈ ಕೇಸಿನ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ವಿರುದ್ಧ ಬೇರೆ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ಮದಲಾಪುರ ಮತ್ತು ಶಿರಹೊಳಲು ಒಂದೆ ಗ್ರಾಮ ಎಂದರೆ ಸರಿ. ಆರ್ ಟಿ ಸಿ ದಾಖಲೆಗಳಲ್ಲಿ ಶಿರ ಹೊಳಲು ಗ್ರಾಮ ಎಂದು ಮಾತ್ರ ಬರುತ್ತದೆ ಎಂದರೆ ಸರಿ. ನಾನು ಎಸ್ ಎಸ್ ಎಲ್ ಸಿ ವರೆವಿಗೆ ಕೂಡಿಗೆ ಶಾಲೆಯಲ್ಲಿ ಓದಿರುತ್ತೇನೆ. ತದ ನಂತರ ಹೆಚ್ಚಿನ ಶಿಕ್ಷಣವನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ಪಡೆದುಕೊಂಡಿರುತ್ತೇನೆ.

ಮದಲಾಪುರ ಹಾಲು ಸಂಘ ರವರು ಬಾಡಿಗೆ ಪಡೆದುಕೊಂಡು ಡೈರಿ ನಡೆಸುತ್ತಿದ್ದರು, ಆದರೆ ಎಲ್ಲಿ ಎಂದುನಿಖರವಾಗಿ ನನಗೆ ಗೊತ್ತಿರುವುದಿಲ್ಲ. ನಮ್ಮ ಜಾಗದಲ್ಲಿ ಅವರು ಎಂದಿಗೂ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡು ಸಂಘವನ್ನು ನಡೆಸಿರುವುದಿಲ್ಲ. 1988 ನೇ ಇಸವಿಯಲ್ಲಿ ನನ್ನ ತಾತನಾದ ನಿಂಗರಾಜಯ್ಯ ಮತ್ತು 1 ನೇ ಪ್ರತಿವಾದಿ 30 X 40 ಅಡಿ ಜಾಗವನ್ನು ಸರ್ವೆ ನಂಃ2/34 ಪಿ1 ರಲ್ಲಿ 2 ನೇ ಪ್ರತಿವಾದಿ ಸಂಘಕ್ಕೆ ದಾನವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ದಾನಪತ್ರದಂತೆ 1989 ನೇ ಇಸವಿಯಲ್ಲಿ ಪಂಚಾಯ್ತಿಯಿಂದ ಪರವಾನಗಿ ಪಡೆದುಕೊಂಡು 2 ನೇ ಪ್ರತಿವಾದಿ ಕಟ್ಟಡ ಕಟ್ಟಿಕೊಂಡು ಸಂಘ ನಡೆಸುತ್ತಿದ್ದಾರೆ ಎಂದರೆ

ಸರಿಯಲ್ಲ. ದಾನ ಮಾಡಿದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಃ 2/34 ಪಿ1 ರಲ್ಲಿ ಬೆಳೆದಿದ್ದ ಬೆಳೆಯನ್ನು ನನ್ನ ತಂದೆ ನಮಗೆ ನೀಡುತ್ತಿರಲಿಲ್ಲ. ನನ್ನ ತಂದೆ ಮತ್ತು ತಾತ ದಾನಪತ್ರ ನೀಡಿದ ಬಗ್ಗೆ ನಮಗೆ ಗೊತ್ತಿದ್ದ ಕಾರಣ ನಾವು ಅವರನ್ನು ಪ್ರತಿವಾದಿಗಳಾಗಿ ತೋರಿಸಿ ಈ ಸುಳ್ಳು ದಾವೆಯನ್ನು ತಂದಿರುತ್ತೇವೆ ಎಂದರೆ ಸರಿಯಲ್ಲ. 2004 ನೇ ಇಸವಿಯಲ್ಲಿ ನಾವು ಕಳುಹಿಸಿದಂತ ನೋಟಿಸ್ಗೆ 2 ನೇ ಪ್ರತಿವಾದಿ ಜವಾಬು ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಶ್ರೀ ಹೆಚ್ ಸಿ ಎಂ ಕೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.